ಗಣಿಕ ಕೇಳಿದ

ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 646
2. ಸದಸ್ಯರ ಹೆಸರು : ಮಾನ್ಯ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 24.09.2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಪ್ರಶ್ನೆ	ಉತ್ತರ
ಅ) ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ (ಕೆ.ಎಸ್.ಎಫ್.ಸಿ) ಓ.ಟಿ.ಎಸ್. / ಎಂ.ಸಿ.ಎ.ಆರ್ ಯೋಜನೆಯಡಿ ಎಷ್ಟು ಮಂದಿ ಫಲಾನುಭವಿಗಳು ಸಾಲ ಸೌಲಭ್ಯ ಪಡೆದಿದ್ದಾರೆ; (ಜಿಲ್ಲಾವಾರು ಪೂರ್ಣ ವಿವರವನ್ನು ನೀಡುವುದು)	ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಆಇ/64/ಬಿಎಫ್‌ಸಿ/2015 ದಿನಾಂಕ: 12.01.2016ರ ಪತ್ರದ ಅನ್ವಯ ಸರ್ಕಾರದ ಅನುಮೋದನೆಯೊಂದಿಗೆ ಪರಿಷ್ಕೃತ ದೀರ್ಘಕಾಲೀನ ಸುಸ್ತಿ ಆಸ್ತಿಗಳ ತೀರುವಳಿ ಯೋಜನೆಯು (ಎಂ.ಸಿ.ಎ.ಆರ್) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಜನವರಿ 2016ರಿಂದ ಅನುಷ್ಠಾನಗೊಳಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಸುತ್ತೋಲೆಯನ್ನು ಲಗತ್ತಿಸಲಾಗಿದೆ. ಕಳೆದ ಮೂರು ವರ್ಷಗಳಿಂದ (2017-18 ರಿಂದ 2019-20ರವರೆಗೆ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಓ.ಟಿ.ಎಸ್. / ಎಂ.ಸಿ.ಎ.ಆರ್. ಯೋಜನೆಯಡಿ ಒಟ್ಟು 17 ಘಟಕಗಳು ಸಾಲ ತೀರುವಳಿ ಮಾಡಿದ್ದು, ಘಟಕಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.
ಆ) ಸದರಿ ಸೌಲಭ್ಯವನ್ನು ಪ್ರಧಾನ ಮೊತ್ತ (Principal Amount) ಲೆಕ್ಕಾಚಾರ ಮಾಡಿ ಎಷ್ಟು ಮಂದಿ ಫಲಾನುಭವಿಗಳಿಗೆ ನೀಡಲಾಗಿದೆ; (ವಿವರ ನೀಡುವುದು)	ಬಾಕಿ ಇರುವ ಅಸಲಿನ (Principal) ಆಧಾರದ ಮೇಲೆ ಒಟ್ಟು 2 ಘಟಕಗಳಿಗೆ ಓ.ಟಿ.ಎಸ್. / ಎಂ.ಸಿ.ಎ.ಆರ್. ಯೋಜನೆಯಡಿ ಸೌಲಭ್ಯ ನೀಡಲಾಗಿದ್ದು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.

ಇ) ಈ ಸೌಲಭ್ಯವನ್ನು ಅಂತಿಮಗೊಳಿಸುವಾಗ ಸರಳ ಬಡ್ಡಿ ಆಧಾರ ಹಾಗೂ ಫಲಾನುಭವಿಗಳ 4 ಜಾಮೀನುದಾರರ ಭದ್ರತಾ ಠೇವಣಿಗಳ ಮೊತ್ತವನ್ನು ನಿಗದಿಪಡಿಸಲಾಗಿತ್ತೇ;	ಎಂ.ಸಿ.ಎ.ಆರ್ ಯೋಜನೆಯಡಿಯಲ್ಲಿ , OTS ಸೌಲಭ್ಯವನ್ನು ಅಂತಿಮಗೊಳಿಸುವಾಗ ವಿತರಣೆಯಾಗಿರುವ ಸಾಲ, ಮರುಪಾವತಿ ಮಾಡಿದ ಹಣ, ಬಡ್ಡಿದರ, ಉದ್ಯಮ ವಿಫಲತೆಗೆ ಕಾರಣ, ಪ್ರಾಥಮಿಕ ಭದ್ರತೆಯಾಗಿ ನೀಡಿದ ಆಸ್ತಿಗಳು ಮತ್ತು ಪೂರಕ ಭದ್ರತೆಯಾಗಿ ನೀಡಿರುವ ಆಸ್ತಿಯ ಮೌಲ್ಯ ಹಾಗೂ ವೈಯಕ್ತಿಕ ಖಾತರಿದಾರರ ಆಸ್ತಿ ಈ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ನಿಗಧಿಪಡಿಸಲಾಗಿದೆ.
ಈ) ನಿಯಮ 32 (ಜಿ) ಹಾಗೂ 31 (ಎ) ರಡಿಯಲ್ಲಿ 2018ರಿಂದ 2020ರವರೆಗೆ ಎಷ್ಟು ಮಂದಿ ಆಸ್ತಿಯನ್ನು (Property) ಮಾರಿದ್ದಾರೆ; ಮಾರಿದ್ದಲ್ಲಿ, ಅವರುಗಳ ವಿವರ ಒದಗಿಸುವುದು.	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ 1951 / 1964 ರ ನಿಯಮ 31 (1)(ಎ)(ಎ) ಹಾಗೂ 32(ಜಿ) ರಡಿಯಲ್ಲಿ 2018–19 ಹಾಗೂ 2019–20ರ ಹಣಕಾಸಿನ ವರ್ಷಗಳಲ್ಲಿ ಯಾವುದೇ ಆಸ್ತಿಗಳನ್ನು ಮಾರಾಟ ಮಾಡಿರುವುದಿಲ್ಲ.
ಉ) ಸಾಲ ಪಡೆದ ಫಲಾನುಭವಿಗಳ ಪೈಕಿ ಎಷ್ಟು ಮಂದಿ ಡಿ.ಆರ್.ಟಿ.ಯ ಮೊರೆ ಹೋಗಿದ್ದಾರೆ; ಇದರಲ್ಲಿ ಎಷ್ಟು ಪ್ರಕರಣಗಳು ಯಾವ ಮೊತ್ತಕ್ಕೆ ಇತ್ಯರ್ಥವಾಗಿರುತ್ತವೆ?	ಸಾಲ ಪಡೆದ ಫಲಾನುಭವಿಗಳ ಪೈಕಿ 12 ಫಲಾನುಭವಿಗಳು ಡಿ.ಆರ್.ಟಿ.ಯ ಮೊರೆ ಹೋಗಿದ್ದು, ಯಾವುದೇ ಪ್ರಕರಣಗಳು ಇದುವರೆಗೂ ಇತ್ಯರ್ಥವಾಗಿರುವುದಿಲ್ಲ.

ಆಇ 02 ಬಿಎಫ್ ಸಿ 2020

ಬಿ.ಎಸ್.ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಅನುಬಂಧ–1

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಏಪ್ರಿಲ್ 2017ರಿಂದ ಮಾರ್ಚ್ 2020ರವರೆಗೆ (ಎಂಕಾರ್) ಯೋಜನೆಯಡಿಯಲ್ಲಿ ಓ.ಟಿ.ಎಸ್. ಪಡೆದ ಫಲಾನುಭವಿಗಳ ವಿವರಗಳು

(GoK ಓ.ಟಿ.ಎಸ್. ಹೊರತುಪಡಿಸಿ)

(ಮೊತ್ತ ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆ	ಘಟಕದ ಹೆಸರು	ವಿತರಣೆ ಮೊತ್ತ	ಓ.ಟಿ.ಎಸ್. ದಿನಾಂಕ	ಓ.ಟಿ.ಎಸ್. ಮೊತ್ತ	ಓ.ಟಿ.ಎಸ್. ಮುನ್ನ ವಸೂಲಾತಿ	ಓ.ಟಿ.ಎಸ್. ನಂತರ ವಸೂಲಾತಿ	ಒಟ್ಟು ವಸೂಲಾತಿ
1	ಬಳ್ಳಾರಿ	ರಾಯಲ್ ಪ್ಯಾಕೇಜಿಂಗ್ ಇಂಡಸ್ಟ್ರೀಸ್	18,72,698	31-Mar-19	8,63,189	17,18,650	8,63,189	25,81,839
2	ಬೆಂಗಳೂರು ಗ್ರಾಮಾಂತರ	ಚೌಡೇಶ್ವರಿ ಮೈನಿಂಗ ಎಕ್ಯೂಪ್‌ಮೆಂಟ್	11,76,000	22-Jun-17	53,52,375	5,40,000	53,52,375	58,92,375
3	ಬೆಂಗಳೂರು ನಗರ	ಬಿಇ ಅನ್‌ಲೈನ್ (ಇಂಡಿಯಾ) ಲಿಮಿಟೆಡ್	19,88,527	18-Jun-18	60,09,180	16,44,176	60,09,180	76,53,356
4	ಬೆಂಗಳೂರು ನಗರ	ಸೌರ್ಪಣಿಕಾ ಬಿವರೇಜಸ್ ಪ್ರೈ. ಲಿ.	70,00,000	22-Jun-17	3,15,16,180	27,18,841	3,17,32,860	3,44,51,701
5	ಬೀದರ್	ಹೋಟೆಲ್ ಅರ್ಚನಾ	19,02,006	22-Apr-17	15,00,134	35,30,253	15,00,134	50,30,387
6	ಬೀದರ್	ಕಾರಂಜಾ ಫುಟ್ ವೇರ್ ಇಂಡಸ್ಟ್ರೀಸ್	9,90,782	18-Jun-18	5,00,000	5,27,415	5,01,400	10,28,815
7	ಚಿಕ್ಕಬಳ್ಳಾಪುರ	ಕೃಷ್ಣಪ್ಪ ಎಂ. (ಕೆ.ಎ.–07/2190)	10,53,000	03-Jan-18	10,31,165	18,63,985	11,60,800	30,24,785
8	ದಕ್ಷಿಣ ಕನ್ನಡ	ತಿರುಪತಿ ಸ್ಟೋನ್ ಇಂಡಸ್ಟ್ರೀಸ್	41,50,000	09-Mar-18	80,00,000	66,11,242	80,00,000	1,46,11,242
9	ಗದಗ	ಶಿವಾನಂದ್ ಆರ್. ನಾಯಕ್	1,96,000	09-Mar-18	70,000	1,16,458	70,000	1,86,458
10	ಗದಗ	ವೇಲ್‌ಜೀ ಮೂಲ್‌ಜೀ ಕಾಟನ್ ಅಂಡ್ ಆಯಿಲ್ ಪ್ರೈ.ಲಿ.	1,07,14,000	20-May-19	2,36,25,000	3,11,84,929	77,715	3,12,62,644
11	ಹಾಸನ	ಎಸ್.ಎಫ್. ಆನರಲ್ ಇಂಜಿನೀಯರಿಂಗ್ ವರ್ಕ್ಸ್	2,00,000	29-Jun-19	10,000	99,500	10,000	1,09,500
12	ಹಾವೇರಿ	ಸಯ್ಯದ್ ಮೂಜಾಫ್ರಿ ರೈಸ್ ಇಂಡಸ್ಟ್ರೀಸ್	14,50,000	22-Jun-17	4,50,000	69,27,493	4,50,000	73,77,493
13	ತುಮಕೂರು	ಬಸವೇಶ್ವರ ರೈಸ್ ಮಿಲ್	22,25,000	14-Nov-19	2,75,000	48,32,424	3,67,013	51,99,437
14	ತುಮಕೂರು	ಕನ್ನಿಕಾ ಪರಮೇಶ್ವರಿ ಇಂಡಸ್ಟ್ರೀಸ್	30,33,000	24-Oct-19	4,61,250	33,90,885	4,61,250	38,52,135
15	ತುಮಕೂರು	ಎಂಜೀಸ್ ಕನ್‌ವೆನ್‌ಷನ್ ಹಾಲ್	52,00,000	29-Aug-18	85,88,259	26,62,589	86,01,240	1,12,63,829
16	ತುಮಕೂರು	ಶ್ರೀ ರೇವಣ್ಣಸಿದ್ದೇಶ್ವರಸ್ವಾಮಿ	27,45,000	28-Feb-19	5,00,000	26,84,331	5,00,000	31,84,331
17	ತುಮಕೂರು	ವೆಂಕಟೇಶ್ವರ ಎಂಟರ್‌ಪ್ರೈಸಸ್	76,85,000	24-Oct-19	5,26,000	74,33,952	5,26,000	79,59,952
		ಒಟ್ಟು ಮೊತ್ತ	**5,35,81,013**		**8,92,77,732**	**7,84,87,123**	**6,61,83,156**	**14,46,70,279**

ಅನುಬಂಧ–2

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಏಪ್ರಿಲ್ 2017ರಿಂದ ಮಾರ್ಚ್ 2020ರವರೆಗೆ (ಎಂಕಾರ್) ಯೋಜನೆಯಡಿಯಲ್ಲಿ ಅಸಲು ಮತ್ತು ಇತರೆ ಪೆಚ್ಚದ ಆಧಾರದ ಮೇಲೆ ಓ.ಟಿ.ಎಸ್. ಪಡೆದ ಫಲಾನುಭವಿಗಳ ವಿವರಗಳು

(GoK ಓ.ಟಿ.ಎಸ್. ಹೊರತುಪಡಿಸಿ)

(ಮೊತ್ತ ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆ	ಘಟಕದ ಹೆಸರು	ವಿತರಣೆ ಮೊತ್ತ	ಓ.ಟಿ.ಎಸ್. ದಿನಾಂಕ	ಓ.ಟಿ.ಎಸ್. ಮೊತ್ತ	ಓ.ಟಿ.ಎಸ್. ಮುನ್ನ ವಸೂಲಾತಿ	ಓ.ಟಿ.ಎಸ್. ನಂತರ ವಸೂಲಾತಿ	ಒಟ್ಟು ವಸೂಲಾತಿ
1	ಬಳ್ಳಾರಿ	ರಾಯಲ್ ಪ್ಯಾಕೇಜಿಂಗ್ ಇಂಡಸ್ಟ್ರೀಸ್	18,72,698	31-Mar-19	8,63,189	17,18,650	8,63,189	25,81,839
2	ಬೀದರ್	ಹೋಟೆಲ್ ಅರ್ಚನಾ	19,02,006	22-Apr-17	15,00,134	35,30,253	15,00,134	50,30,387
		ಒಟ್ಟು ಮೊತ್ತ	**37,74,704**		**23,63,323**	**52,48,903**	**23,63,323**	**76,12,226**

ಕರ್ನಾಟಕ ಸರ್ಕಾರ

ಸಂಖ್ಯೆ :ಆಇ 64 ಬಿಎಫ್‌ಸಿ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:12–01–2016.

ಇಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ, ಬೆಂಗಳೂರು.

ಇವರಿಗೆ:
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಕೆ.ಎಸ್.ಎಫ್.ಸಿ.ಭವನ, ನಂ.1/1,
ತಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ,
ಬೆಂಗಳೂರು–5600052.

ಮಾನ್ಯರೇ,

ವಿಷಯ:– ಪರಿಷ್ಕೃತ ದೀರ್ಘಕಾಲೀನ ಸುಸ್ತಿ ಆಸ್ತಿಗಳ ತೀರುವಳಿ ಯೋಜನೆಯ ಮತ್ತಷ್ಟು ತಿದ್ದುಪಡಿ ಮತ್ತು ಸಾಲಕ್ಕೆ ಪೂರಕ ಭದ್ರತೆಗಾಗಿ ನೀಡಲಾದ ಮೂರನೇ ಪಕ್ಷಕಾರನಿಗೆ ಸೇರಿದ ಆಸ್ತಿಯನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:– 1). ಸರ್ಕಾರದ ಪತ್ರ ಸಂಖ್ಯೆ ಆಇ 59 ಬಿಎಫ್‌ಸಿ2012 ದಿನಾಂಕ: 19.1.2013

2). ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಬೆಂಗಳೂರು ಇವರ ಪತ್ರ ಸಂಖ್ಯೆ: CMD/GM(C-1)/101/2015–16 ದಿನಾಂಕ: 18.11.2015 ಮತ್ತು CMD/GM(C-1)/111/2015-16 ದಿನಾಂಕ 23.12.2015.

3). ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಪತ್ರ ಸಂ: KSFC/HD/13-14/166 ದಿನಾಂಕ: 2.12.2013 ಹಾಗೂ ಸಂಖ್ಯೆ: DGM/(C)/HD-04 ದಿನಾಂಕ: 7.5.2014

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1) ಸರ್ಕಾರದ ಪತ್ರದಲ್ಲಿ ಪರಿಷ್ಕೃತ ದೀರ್ಘಕಾಲೀನ ಸುಸ್ತಿ ಆಸ್ತಿಗಳ ತೀರುವಳಿ ಯೋಜನೆಯನ್ನು ಅನುಮೋದಿಸಲಾಗಿತ್ತು.

.....2

ಉಲ್ಲೇಖಿತ (2) ರ ತಮ್ಮ ಪತ್ರದಲ್ಲಿ ಈ ಪರಿಷ್ಕೃತ ದೀರ್ಘಕಾಲೀನ ತೀರುವಳಿ ಯೋಜನೆಗೆ ಮತ್ತಷ್ಟು ತಿದ್ದುಪಡಿ ಮಾಡಲು ಸರ್ಕಾರದ ಅನುಮೋದನೆ ಕೋರಲಾಗಿದೆ.

ಹಾಗೆಯೇ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಪಡೆದ ಸಾಲಕ್ಕೆ ಒದಗಿಸಲಾದ ಮೂರನೇ ಪಕ್ಷಕಾರನಿಗೆ ಸೇರಿದ ಆಸ್ತಿಯನ್ನು ಬಿಡುಗಡೆ ಮಾಡುವ ಬಗ್ಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಉಲ್ಲೇಖ (3) ರಲ್ಲಿರುವ ದಿನಾಂಕ: 2.12.2013 ಹಾಗೂ 7.5.2014ರ ಪತ್ರಗಳಲ್ಲಿ ಸರ್ಕಾರದ ಅನುಮೋದನೆಯನ್ನು ಕೋರಲಾಗಿದೆ.

ಉಲ್ಲೇಖ (2) ಮತ್ತು (3) ರಲ್ಲಿನ ಪ್ರಸ್ತಾವನೆಯಂತೆ ಪರಿಷ್ಕೃತ ದೀರ್ಘಕಾಲೀನ ಸುಸ್ತಿಆಸ್ತಿಗಳ ತೀರುವಳಿ ಯೋಜನೆಗೆ (MCAR) ಸಂಬಂಧಿಸಿದಂತೆ ಇದರೊಂದಿಗೆ ಲಗತ್ತಿಸಿರುವ ಅನುಬಂಧ (ಎ) ರಲ್ಲಿರುವ ತಿದ್ದುಪಡಿಗಳನ್ನು ಮಾಡಲು ಹಾಗೂ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಪಡೆದ ಸಾಲಕ್ಕೆ ಒದಗಿಸಲಾದ ಮೂರನೇ ಪಕ್ಷಕಾರನಿಗೆ ಸೇರಿದ ಪೂರಕ ಭದ್ರತೆ ಆಸ್ತಿಗಳನ್ನು ಬಿಡುಗಡೆ ಮಾಡುವುದಕ್ಕೆ ಸಂಬಂದಿಸಿದಂತೆ ಅನುಬಂಧ (ಬಿ)ಯಲ್ಲಿ ತಿಳಿಸಿರುವ ನಿಯಮ ಮತ್ತು ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಸರ್ಕಾರವು ಅನುಮೋದನೆ ನೀಡಿದೆ.

ಈ ಯೋಜನೆಗಳಿಗೆ ಸಂಬಂಧಿಸಿದಂತೆ ಯಾವುದೇ ಆರ್ಥಿಕ ಸಹಾಯವನ್ನು ಸರ್ಕಾರದಿಂದ ನೀಡಲಾಗುವುದಿಲ್ಲವೆಂದು ತಿಳಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

12/1/16

(ಹೆಚ್.ಎ. ಶೋಭ)
ಸರ್ಕಾರದ ಅಧೀನ ಕಾರ್ಯದರ್ಶಿ
(ಆರ್ಥಿಕ ನಿಯಮಗಳು, ಆಯವ್ಯಯ
ಸಂಕಲನ ಮತ್ತು ಸಮಿತಿ ಶಾಖೆ)
ಆರ್ಥಿಕ ಇಲಾಖೆ

ಅನುಬಂಧ – ಎ

ಪರಿಷ್ಕೃತ ದೀರ್ಘಕಾಲೀನ ಸುಸ್ತಿ ಆಸ್ತಿಗಳ ತೀರುವಳಿ ಯೋಜನೆಯ ಮತ್ತಷ್ಟು ತಿದ್ದುಪಡಿ ಮಾಡುವ ಬಗ್ಗೆ.

*****

(1) <u>ಅರ್ಹ ಖಾತೆಗಳು</u> :

ಅ) ದಿನಾಂಕ 31.10.2003 ಅಥವಾ ಅದಕ್ಕಿಂತ ಮೊದಲು ಸಾಲ ಮಂಜೂರಾಗಿರಬೇಕು.

ಮತ್ತು

ದಿನಾಂಕ 31.03.2011ರಲ್ಲಿ ಖಾತೆಯು ಅನುಮಾನಾಸ್ಪದ ವರ್ಗ–3 (ಡಿ–3) ರಲ್ಲಿರತಕ್ಕದ್ದು. ಇದಲ್ಲದೆ, ಖಾತೆಯು ಮೇಲಿನ ನಿಗದಿತ ದಿನಾಂಕದಿಂದ ಹಿಂದಿನ 2 ವರ್ಷಗಳಿಂದ ಅನುಮಾನಾಸ್ಪದ ವರ್ಗ–3ರಲ್ಲಿರಬೇಕು.

ಆ) ಎಂ.ಆರ್. (ಮೆಮೊರ್ಯಾಂಡಮ್ ರಿಜಿಸ್ಟರ್) ನಲ್ಲಿರುವ ಎಲ್ಲಾ ಘಟಕಗಳು.

(2) ಅನರ್ಹವಾದ ಪ್ರಕರಣಗಳು:

ಅ) ಈ ಯೋಜನೆಯಡಿ ವಸತಿ ಉದ್ದೇಶಕ್ಕೆ ನಿರ್ಮಿಸಲಾದ ಬಡಾವಣೆಗಳು, ವಸತಿ ಉದ್ದೇಶಕ್ಕೆ ನಿರ್ಮಿಸಲಾಗುವ ವಸತಿ ಸಂಕೀರ್ಣಗಳು, ವಾಣಿಜ್ಯ ಸಂಕೀರ್ಣಗಳು / ಕಛೇರಿ ಸಂಕೀರ್ಣಗಳು / ವ್ಯಾಪಾರಿ ಮಳಿಗೆಗಳು ಬಾಡಿಗೆ ಉದ್ದೇಶಕ್ಕಾಗಿ ನಿರ್ಮಿಸಲಾದ ಉಗ್ರಾಣ / ಗೋದಾಮುಗಳು, ಹಾಗೂ ರೆಂಟಲ್ ಡಿಸ್ಕೌಂಟಿಂಗ್ ಯೋಜನೆಯಡಿ ಮಂಜೂರು ಮಾಡಿರುವ ಸಾಲಗಳು ತೀರುವಳಿ ಸೌಲಭ್ಯ ಹೊಂದಲು ಅರ್ಹವಾಗಿರುವುದಿಲ್ಲ. ಆದರೆ, ಪ್ರಾಥಮಿಕ ಮತ್ತು ಪೂರಕ ಭದ್ರತೆ ಆಸ್ತಿಗಳು ಮಾರಾಟವಾಗಿದ್ದಲ್ಲಿ ಅಂತಹ ಸಾಲದ ಖಾತೆಗಳನ್ನು ಸದರಿ ಯೋಜನೆಯಡಿ ಪರಿಗಣಿಸಬಹುದು.

ಇ) ಉದ್ದೇಶ ಪೂರ್ವಕವಾಗಿ ಸುಸ್ತಿಯಾದ ಪ್ರಕರಣಗಳು ಮೋಸ ಮತ್ತು ದುಷ್ಕೃತ್ಯ ಎಸಗಿದ ಪ್ರಕರಣಗಳು.

(3) <u>ತೀರುವಳಿ ಸೂತ್ರ:</u>

	ವರ್ಗ	ಕನಿಷ್ಠ ತೀರುವಳಿ ಮೊತ್ತ
ಅ)	ಪ್ರಾಥಮಿಕ ಆಸ್ತಿಗಳ ಮೌಲ್ಯ ಸರಳ ಬಡ್ಡಿ ಆಧಾರದ ಮೇಲೆ ಪಾವತಿಸಬೇಕಾದ ಮೊತ್ತಕ್ಕಿಂತ ಎರಡರಷ್ಟಕ್ಕಿಂತ ಹೆಚ್ಚಾಗಿರುವ ಸಂದರ್ಭದಲ್ಲಿ *	ವಿತರಿಸಿದ ಮೊತ್ತ + ಇತರೆ ವೆಚ್ಚ + ಸರಳ ಬಡ್ಡಿ ಆಧಾರದನ್ವಯ ಪಾವತಿಸಲು ಕೋರಿದ ಎರಡು ಪಟ್ಟು, ಇದರಲ್ಲಿ ಮರುಪಾವತಿಸಿದ ಮೊತ್ತವನ್ನು ಕಳೆಯತಕ್ಕದ್ದು ಹಾಗೂ ಯಾವುದೇ ಅಸಲಿನ ಮನ್ನಾ ಇರುವುದಿಲ್ಲ
ಆ)	ಭದ್ರತೆ ನೀಡಿದ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ ನಿವ್ವಳ ಮೌಲ್ಯದ ಶೇ.50ರಷ್ಟು ಮೊತ್ತವು ಸರಳ ಬಡ್ಡಿ ಆಧಾರದ ಮೇಲೆ ಪಾವತಿಸಬೇಕಾದ ಮೊತ್ತಕ್ಕಿಂತ ಹೆಚ್ಚಾಗಿರುವ ಸಂದರ್ಭದಲ್ಲಿ ಮತ್ತು ಮೇಲ್ಕಾಣಿಸಿದ (ಅ) ವರ್ಗದಡಿ ಬರದೇ ಇರುವ ಪಕ್ಷದಲ್ಲಿ	ಸರಳ ಬಡ್ಡಿ ಆಧಾರದ ಮೇಲೆ (ಅಂದರೆ ವಿತರಿಸಿದ ಮೊತ್ತ + ಇತರೆ ವೆಚ್ಚ + ಸರಳ ಬಡ್ಡಿ ಆಧಾರದನ್ವಯ ಪಾವತಿಸಲು ಕೋರಿದ ಮೊತ್ತ, ಇದರಲ್ಲಿ ಮರುಪಾವತಿಸಿದ ಮೊತ್ತವನ್ನು ಕಳೆಯತಕ್ಕದ್ದು) ಹಾಗೂ ಯಾವುದೇ ಅಸಲಿನ ಮನ್ನಾ ಇರುವುದಿಲ್ಲ
ಇ	ಭದ್ರತೆ ನೀಡಿದ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ ನಿವ್ವಳ ಮೌಲ್ಯದ ಶೇ.50ರಷ್ಟು ಮೊತ್ತವು ಸರಳ ಬಡ್ಡಿ ಆಧಾರದ ಮೇಲೆ ಪಾವತಿಸಬೇಕಾದ ಮೊತ್ತಕ್ಕಿಂತ ಕಡಿಮೆ ಇದ್ದು ಹಾಗೂ (ಅಸಲು ಬಾಕಿ + ಇತರೆ ವಚ್ಚ) ಮೊತ್ತದ ಶೇ.30ಕ್ಕಿಂತ ಹೆಚ್ಚಿಗೆ ಇದ್ದ ಪಕ್ಷದಲ್ಲಿ	ಶೇ.75ರಷ್ಟು ಭದ್ರತೆ ನೀಡಿದ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ ನಿವ್ವಳ ಮೌಲ್ಯದ ಶೇ.50ರಷ್ಟು ಅಥವಾ ಶೇ.30ರಷ್ಟು (ಅಸಲು ಬಾಕಿ + ಇತರೆ ವೆಚ್ಚ) ಮೊತ್ತ ಇವೆರಡರಲ್ಲಿ ಅಧಿಕವಾಗಿರುವ ಮೊತ್ತ
ಈ	ಭದ್ರತೆ ನೀಡಿದ ಆಸ್ತಿಗಳನ್ನು ಮಾರಾಟ ಮಾಡಿದ್ದು / ಮೊಬಲಗನ್ನು ಪಡೆದಿದ್ದು, ವೈಯಕ್ತಿಕ ಆಸ್ತಿಗಳ ನಿವ್ವಳ ಮೌಲ್ಯವು ಇಲ್ಲದಿದ್ದರೆ ಅಥವಾ (ಅಸಲು ಬಾಕಿ + ಇತರೆ ವೆಚ್ಚ) ಮೊತ್ತದ ಶೇ.30ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ	ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಿರ್ದೇಶಕ ಮಂಡಳಿಯ ಉಪ ಸಮಿತಿಯು ಅನುಮೋದಿಸುವ ಗರಿಷ್ಠ ಸಾಧ್ಯ ಮೊತ್ತವನ್ನು ನಿರ್ದೇಶಕ ಮಂಡಳಿ ಸಭೆಯ ಮುಂದೆ ತೀರ್ಮಾನಕ್ಕಾಗಿ ಇಡಲಾಗುವುದು

* ಸರಳ ಬಡ್ಡಿ ಆಧಾರದ ಮೇಲೆ ಪಾವತಿಸಬೇಕಾದ ಮೊತ್ತಕ್ಕಿಂತ ಎರಡರಷ್ಟಕ್ಕಿಂತ ಹೆಚ್ಚಾಗಿರುವ ಸಂದರ್ಭದಲ್ಲಿ ಅಂದರೆ ವಿತರಿಸಿದ ಮೊತ್ತ + ಇತರೆ ವೆಚ್ಚ + ಸರಳ ಬಡ್ಡಿ ಆಧಾರದನ್ವಯ ಪಾವತಿಸಲು ಕೋರಿದ ಎರಡು ಪಟ್ಟು, ಇದರಲ್ಲಿ ಮರುಪಾವತಿಸಿದ ಮೊತ್ತವನ್ನು ಕಳೆಯುವುದು.

ಟಿಪ್ಪಣಿ:

(i) ಒಂದೊಮ್ಮೆ ಸಾಲಕ್ಕೆ ಪೂರಕ ಭದ್ರತೆಯಾಗಿ ನೀಡಲಾಗಿರುವ ಆಸ್ತಿಯು ವಾಸ ಮಾಡುವ ಒಂದೇ ಮನೆಯಾಗಿದ್ದು, ಅದರಲ್ಲಿ ಪೂರಕ ಭದ್ರತೆ ಆಸ್ತಿಯ ಮಾಲೀಕರು ವಾಸವಾಗಿದ್ದಲ್ಲಿ, ನಿರ್ಧರಣಾ ಮೊತ್ತವನ್ನು ಲೆಕ್ಕ ಮಾಡುವಾಗ ಸದರಿ ಆಸ್ತಿಯ ಮೌಲ್ಯದ ಮೇಲೆ ಶೇ.25ರಷ್ಟು ರಿಯಾಯಿತಿಯನ್ನು ಕೊಡಲಾಗುವುದು. ಆದರೆ, ಮೇಲ್ಕಾಣಿಸಿದ ತೀರುವಳಿ ಸೂತ್ರದ (ಇ) ವರ್ಗಕ್ಕೆ ಅನ್ವಯಿಸುವುದಿಲ್ಲ, ಏಕೆಂದರೆ ಈ ವರ್ಗದಲ್ಲಿ ಶೇ.25ರಷ್ಟು ರಿಯಾಯಿತಿಯನ್ನು ಈಗಾಗಲೇ ನೀಡಲಾಗಿದೆ.

(ii) ವಾಸ ಮಾಡುವ ಒಂದೇ ಮನೆಯ ಮೌಲ್ಯಕ್ಕೆ ನೀಡುವ ಶೇ.25ರಷ್ಟು ರಿಯಾಯಿತಿಗೆ ಹೊರತಾಗಿ ಒಂದೊಮ್ಮೆ ಸಾಲಕ್ಕೆ ಪೂರಕ ಭದ್ರತೆಯಾಗಿ ನೀಡಲಾಗಿರುವ ಆಸ್ತಿ / ವೈಯಕ್ತಿಕ ಆಸ್ತಿಗಳು MCAR ನಿಯಮಾವಳಿಗಳ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿದ್ದಲ್ಲಿ ಶೇ.25ರವರೆಗೆ ಹೆಚ್ಚುವರಿ ರಿಯಾಯಿತಿಯನ್ನು ಕೊಡಲಾಗುವುದು.

(iii) ಒಂದೊಮ್ಮೆ ಘಟಕದ ಮುಖ್ಯ ಪ್ರವರ್ತಕರು ನಿಧನ ಹೊಂದಿದ್ದಲ್ಲಿ ಅಥವಾ ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿದ್ದಲ್ಲಿ, ಅಸಮರ್ಥರಾಗಿದ್ದು ಮತ್ತು ಘಟಕವನ್ನು ನಡೆಸಲು ಸಾಧ್ಯವಿಲ್ಲದ ಪಕ್ಷದಲ್ಲಿ ಅಥವಾ ಬೇರಾವ ಮೂಲಗಳಿಂದ ಆದಾಯವಿಲ್ಲದಿದ್ದಲ್ಲಿ, ವೈಯಕ್ತಿಕ ಆಸ್ತಿಗಳ ವಿವರವಾದ ತನಿಖೆಯ ನಂತರ ನಿರ್ಧರಣಾ ಸೂತ್ರದ ಪ್ರಕಾರ ನಿಗಧಿಪಡಿಸಿದ ತೀರುವಳಿ ಮೊತ್ತಕ್ಕೆ ಶೇ.25ರವರೆಗೆ ರಿಯಾಯಿತಿಯನ್ನು ಕೊಡಲಾಗುವುದು.

(iv) ಪ್ರಾಥಮಿಕ ಮತ್ತು ಪೂರಕ ಭದ್ರತೆ ಆಸ್ತಿಗಳನ್ನು ಮಾರಾಟ ಮಾಡಲಾಗಿದ್ದ ಪ್ರಕರಣಗಳಲ್ಲಿ ತೀರುವಳಿ ಮಾಡಬೇಕಾದ ಮೊತ್ತವು ಸರಳ ಬಡ್ಡಿ ಆಧಾರದ ಮೇಲೆ ತೀರುವಳಿ ಸೂತ್ರದ (ಆ) ವರ್ಗದ ಪ್ರಕಾರ ನಿರ್ಧಾರವಾದ ಪಕ್ಷದಲ್ಲಿ ಸಾಲದ ಮರುಪಾವತಿ ಅವಧಿ, ಬಡ್ಡಿ ದರ, ಈಗಾಗಲೇ ಮರುಪಾವತಿಸಿರುವ ಮೊತ್ತ, ಆಸ್ತಿಯ ಮೇಲಿನ ಋಣಭಾರ, ಆಸ್ತಿಗೆ ಸಂಬಂಧಪಟ್ಟ ವ್ಯಾಜ್ಯ, ನ್ಯಾಯಾಲಯದ ಮುಖಾಂತರ ಸಾಲ ವಸೂಲಾತಿಗೆ ತೆಗೆದುಕೊಳ್ಳಬಹುದಾದ ಸಮಯ, ಇವುಗಳನ್ನು ಪರಿಗಣಿಸಿ, ಮೇಲೆ ತಿಳಿಸಿದ ಖಂಡಿಕೆ (ii) & (iii) ರಲ್ಲಿ ನೀಡಲಾದ ರಿಯಾಯಿತಿ ಅಲ್ಲದೆ ಶೇ.25ರವರೆಗೆ ಹೆಚ್ಚುವರಿ ರಿಯಾಯಿತಿಯನ್ನು ನೀಡಬಹುದು.

(v) ಈ ಮೇಲಿನ ಖಂಡಿಕೆ (ii), (iii) & (iv) ರಲ್ಲಿ ತಿಳಿಸಿದ ರಿಯಾಯಿತಿ ನೀಡುವ ಪ್ರಸ್ತಾವನೆಗಳನ್ನು ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆಯುವ ಉಪ ಸಮಿತಿಯು ತೀರ್ಮಾನಿಸಿ, ಸದರಿ ಸಮಿತಿಯ ಶಿಫಾರಸ್ಸನ್ನು ಸಂಸ್ಥೆಯ ಕಾರ್ಯನಿರ್ವಾಹಕ ಮಂಡಳಿ / ನಿರ್ದೇಶಕ ಮಂಡಳಿಯ ಮುಂದೆ ಅಂತಿಮ ತೀರ್ಮಾನಕ್ಕಾಗಿ ಮಂಡಿಸಲಾಗುವುದು.

(vi) ದಿನಾಂಕ 01.04.2009 ಹಾಗೂ ನಂತರದ ಅವಧಿಯಲ್ಲಿ ತೀರುವಳಿ ಯೋಜನೆಯಡಿ ನಿರ್ಧಾರಗೊಂಡ ಪ್ರಕರಣಗಳಲ್ಲಿ ಬಾಕಿ ಉಳಿದಿರುವ ತೀರುವಳಿ ಮೊತ್ತವನ್ನು ಸಂಪೂರ್ಣ ವಿಳಂಬಿತ ಬಡ್ಡಿಯನ್ನು ಪ್ರತಿಶತ 15ರಂತೆ ಸರಳ ಬಡ್ಡಿ ಆಧಾರದ ಮೇಲೆ ಪಾವತಿಸಲು ಅವಕಾಶವಿರುತ್ತದೆ. ಇದಲ್ಲದೆ ಪ್ರವರ್ತಕರು ಪ್ರಸ್ತುತ ಜಾರಿಯಲ್ಲಿರುವ ಯೋಜನೆಯಡಿ ಸಾಲದ

ಖಾತೆಯನ್ನು ಚುಕ್ತಾ ಮಾಡಲು ಬಯಸಿದಲ್ಲಿ, ಈಗಾಗಲೇ ತೀರುವಳಿ ಯೋಜನೆಯಡಿ ಪಾವತಿಸಿರುವ ಮೊತ್ತವನ್ನು (ಮುಂಗಡ ಪಾವತಿಸಿರುವ ಮೊತ್ತವನ್ನೊಳಗೊಂಡಂತೆ) ಗಣನೆಗೆ ತೆಗೆದುಕೊಂಡು ಪ್ರಸ್ತುತ ಯೋಜನೆಯಡಿ ಪಾವತಿಸಬೇಕಾದ ತೀರುವಳಿ ಮೊತ್ತವನ್ನು ತೀರ್ಮಾನಿಸಲಾಗುವುದು.

(vii) ಒಂದಾವರ್ತಿ ತೀರುವಳಿ ಯೋಜನೆಯಡಿ ದಿನಾಂಕ 01.04.2009ಕ್ಕೂ ಮೊದಲು ತೆಗೆದುಕೊಂಡ ನಿರ್ಧಾರವನ್ನು ಊರ್ಜಿತಗೊಳಿಸಲು ಅರ್ಹವಿರುವುದಿಲ್ಲ. ಆದರೆ ಈಗಾಗಲೇ ತೀರುವಳಿ ಯೋಜನೆಯಡಿ ಪಾವತಿಸಿರುವ ಮೊತ್ತವನ್ನು (ಮುಂಗಡ ಪಾವತಿಸಿರುವ ಮೊತ್ತವನ್ನೊಳಗೊಂಡಂತೆ) ಗಣನೆಗೆ ತೆಗೆದುಕೊಂಡು ಪ್ರಸ್ತುತ ಯೋಜನೆಯಡಿ ಪಾವತಿಸಬೇಕಾದ ತೀರುವಳಿ ಮೊತ್ತವನ್ನು ತೀರ್ಮಾನಿಸಲಾಗುವುದು.

(viii) ಮೇಲೆ ತಿಳಿಸಿರುವ ಪ್ರಸ್ತಾವಿತ ತೀರುವಳಿ ಮೊತ್ತವು ಸದರಿ ಯೋಜನೆಯಡಿ ಪಾವತಿಸಬೇಕಾದ ಕನಿಷ್ಟ ಮೊತ್ತವಾಗಿರುತ್ತದೆ.

(ix) ಜಾಲ್ತಿಯಲ್ಲಿರುವ ನಿಗಧಿಪಡಿಸಲಾಗಿರುವ ನಮೂನೆಯಲ್ಲಿ ತಯಾರಿಸಿರುವ ವಿಸ್ತೃತವಾದ ವೈಯಕ್ತಿಕ ಆಸ್ತಿಗಳ ವರದಿಯನ್ನು ಪ್ರಧಾನ ಕಛೇರಿಯಲ್ಲಿ ವಿಭಾಗದ ಮುಖ್ಯಸ್ಥರು ಹಾಗೂ ಶಾಖೆಗಳಲ್ಲಿ ಶಾಖಾ ವ್ಯವಸ್ಥಾಪಕರು ಮತ್ತು ಸಂಬಂಧಪಟ್ಟ ಪ್ರಧಾನ ವ್ಯವಸ್ಥಾಪಕರುಗಳು ದೃಢೀಕರಿಸತಕ್ಕದ್ದು.

(x) 10.00 ಲಕ್ಷ ರೂ.ಗಳು ಮತ್ತು ಅದಕ್ಕೂ ಕಡಿಮೆ ಮೊತ್ತ ವಿತರಣೆಯಾಗಿರುವ ಸಾಲದ ಖಾತೆಗಳಿಗೆ ಕರ್ನಾಟಕ ಸರ್ಕಾರವು ವಿಶೇಷ ಒಂದಾವರ್ತಿ ತೀರುವಳಿ ಯೋಜನೆಯನ್ನು ಊರ್ಜಿತಗೊಳಿಸಿ ಮುಂದುವರೆಸಿದರೆ, ವೈಯಕ್ತಿಕ ಆಸ್ತಿಯ ಮೊತ್ತವನ್ನು ತೀರುವಳಿ ಮೊತ್ತವನ್ನು ನಿರ್ಧರಿಸುವಾಗ ಗಣನೆಗೆ ತೆಗೆದುಕೊಳ್ಳದಿರಬಹುದು.

(xi) ನಿವ್ವಳ ವೈಯಕ್ತಿಕ ಆಸ್ತಿಗಳ ಮೌಲ್ಯವೆಂದರೆ, ಮೌಲ್ಯಮಾಪನ ಮಾರ್ಗಸೂಚಿಯಂತೆ ನಿರ್ಧರಿಸಿದ ಆಸ್ತಿಯ ಮೌಲ್ಯದಲ್ಲಿ ಬೇರೆ ಹಣಕಾಸು ಸಂಸ್ಥೆಗಳ / ಬ್ಯಾಂಕುಗಳ ಹೊಣೆಗಾರಿಕೆ ಮತ್ತು ಶಾಸನಬದ್ಧ ಹೊಣೆಗಾರಿಕೆಗಳಾದ ಮಾರಾಟ ತೆರಿಗೆ, ಆದಾಯ ತೆರಿಗೆ, ಭವಿಷ್ಯ ನಿಧಿ ಬಾಕಿಗಳ ವಸೂಲಾತಿಗಾಗಿ ಸದರಿ ಆಸ್ತಿಯ ಮೇಲೆ ಸಂಬಂಧಪಟ್ಟ ಇಲಾಖೆಯವರು ದಾವೆ ಹೂಡಿದ್ದಲ್ಲಿ, ಸದರಿ ಹೊಣೆಗಾರಿಕೆಗಳ ಮೊತ್ತವನ್ನು ಕಳೆಯತಕ್ಕದ್ದು.

(xii) **ಸಾಲಕ್ಕೆ ಪೂರಕ ಭದ್ರತೆಯಾಗಿ ನೀಡಲಾದ ಮೂರನೇ ಪಕ್ಷಕಾರನಿಗೆ ಸೇರಿದ ಒಂದೇ ವಾಸದ ಮನೆ ಆಸ್ತಿಯನ್ನು ಬಿಡುಗಡೆ ಮಾಡುವ ಬಗ್ಗೆ:** ಸದರಿ ಯೋಜನೆಯಡಿ ತೀರುವಳಿಗೆ ಅರ್ಹವಿರುವ ಪ್ರಕರಣಗಳಲ್ಲಿ ಸಾಲಗಾರರು ತೀರುವಳಿಗಾಗಿ ಮುಂದೆ ಬರದಿದ್ದಲ್ಲಿ ಸಾಲಕ್ಕೆ ಪೂರಕ ಭದ್ರತೆಯಾಗಿ ಆಸ್ತಿಯನ್ನು ನೀಡಲಾಗಿರುವ ಮೂರನೇ ಪಕ್ಷಕಾರರು, ಅವರ ಉತ್ತರಾಧಿಕಾರಿಗಳು, ಆಸ್ತಿಯ ಬಿಡುಗಡೆಗೆ ಸಲ್ಲಿಸಿದ ಮನವಿಯನ್ನು ಅನುಬಂಧ-Iರಲ್ಲಿ ತಿಳಿಸಲಾಗಿರುವ ಷರತ್ತುಗಳು ಮತ್ತು ನಿಬಂಧನೆಗಳ ಅನ್ವಯ ಪರಿಗಣಿಸಬಹುದು.

4. ತೀರುವಳಿ ಪ್ರಸ್ತಾವನೆಯನ್ನು ತೀರ್ಮಾನಿಸುವ ಅಧಿಕಾರ ವ್ಯಾಪ್ತಿ:

(ಅ) ಯಾವುದೇ ಆಸ್ತಿಗಳು (ಪ್ರಾಥಮಿಕ, ಪೂರಕ ಮತ್ತು ವೈಯಕ್ತಿ ಆಸ್ತಿಗಳು) ಲಭ್ಯವಿಲ್ಲದ ಸಂದರ್ಭಗಳಲ್ಲಿ

ವಿವರ	ಅನುಮೋದಿಸುವ ಪ್ರಾಧಿಕಾರ
ತೀರುವಳಿ ಪ್ರಸ್ತಾವನೆಯು ಅಸಲು + ಇತರೆ ವೆಚ್ಚಗಳ ಮೊತ್ತಕ್ಕಿಂತ ಹೆಚ್ಚಿಗೆಯಿದ್ದು ಅಂದರೆ ಅಸಲು + ಇತರೆ ವೆಚ್ಚಗಳ ಮನ್ನಾ ಇರದೆ ಕೇವಲ ಬಡ್ಡಿ ಮನ್ನಾ ಮಾಡುವುದಿದ್ದಲ್ಲಿ	ಸಾಲ ಅನುಮೋದಿಸುವ ಅಧಿಕಾರಿಯ ಮೇಲಧಿಕಾರಿ *
ತೀರುವಳಿ ಪ್ರಸ್ತಾವನೆಯು ಅಸಲು + ಇತರೆ ವೆಚ್ಚಗಳ ಮನ್ನಾ ಮಾಡುವುದಿದ್ದಲ್ಲಿ	ನಿರ್ದೇಶಕ ಮಂಡಳಿ (ಕಾರ್ಯನಿರ್ವಾಹಕ ಮಂಡಳಿಯ ಶಿಫಾರಸ್ಸಿನ ಮೇರೆಗೆ)

(ಆ) ಪ್ರಾಥಮಿಕ / ಪೂರಕ / ವೈಯಕ್ತಿಕ ಆಸ್ತಿಗಳು ಲಭ್ಯವಿರುವ ಪ್ರಕರಣಗಳಲ್ಲಿ:

ವಿವರ	ಅನುಮೋದಿಸುವ ಪ್ರಾಧಿಕಾರ
ಉ.ಪ್ರವ್ಯ./ಪ.ವ್ಯರು ಮತ್ತು ಅವರಿಗಿಂತ ಕೆಳಗಿನ ಅಧಿಕಾರಿಗಳು ಮಂಜೂರು ಮಾಡಿದ ಸಾಲಗಳಲ್ಲಿ ತೀರುವಳಿ ಮೊತ್ತವು 50.00 ಲಕ್ಷ ರೂ.ಗಳವರೆಗೆ ಇದ್ದಲ್ಲಿ ಹಾಗೂ ಅಸಲು ಮತ್ತು ಇತರೆ ವೆಚ್ಚಗಳ ಮನ್ನಾ ಇರದಿದ್ದಲ್ಲಿ (ಬಡ್ಡಿ ಮನ್ನಾ ಮೊತ್ತಕ್ಕೆ ಯಾವುದೇ ಮಿತಿಯಿಲ್ಲದೆ)	ಪ್ರಧಾನ ವ್ಯವಸ್ಥಾಪಕರುಗಳು *
ಪ್ರವ್ಯ ಮತ್ತು ಅವರಿಗಿಂತ ಕೆಳಗಿನ ಅಧಿಕಾರಿಗಳು ಮಂಜೂರು ಮಾಡಿದ ಸಾಲಗಳಲ್ಲಿ ತೀರುವಳಿ ಮೊತ್ತವು 75.00 ಲಕ್ಷ ರೂ.ಗಳವರೆಗೆ ಇದ್ದಲ್ಲಿ ಹಾಗೂ ಅಸಲು ಮತ್ತು ಇತರೆ ವೆಚ್ಚಗಳ ಮನ್ನಾ ಇರದಿದ್ದಲ್ಲಿ (ಬಡ್ಡಿ ಮನ್ನಾ ಮೊತ್ತಕ್ಕೆ ಯಾವುದೇ ಮಿತಿಯಿಲ್ಲದೆ)	ಕಾರ್ಯನಿರ್ವಾಹಕ ನಿರ್ದೇಶಕರುಗಳು
ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಅವರಿಗಿಂತ ಕೆಳಗಿನ ಅಧಿಕಾರಿಗಳು ಮಂಜೂರು ಮಾಡಿದ ಸಾಲಗಳಲ್ಲಿ ತೀರುವಳಿ ಮೊತ್ತವು 100.00 ಲಕ್ಷ ರೂ.ಗಳವರೆಗೆ ಇದ್ದಲ್ಲಿ ಹಾಗೂ ಅಸಲು ಮತ್ತು ಇತರೆ ವೆಚ್ಚಗಳ ಮನ್ನಾ ಇರದಿದ್ದಲ್ಲಿ (ಬಡ್ಡಿ ಮನ್ನಾ ಮೊತ್ತಕ್ಕೆ ಯಾವುದೇ ಮಿತಿಯಿಲ್ಲದೆ)	ವ್ಯವಸ್ಥಾಪಕ ನಿರ್ದೇಶಕರು
ತೀರುವಳಿ ಪ್ರಸ್ತಾವನೆಯಲ್ಲಿ ಅಸಲು ಮತ್ತು ಇತರೆ ವೆಚ್ಚಗಳ ಮನ್ನಾ ಇರದಿದ್ದಲ್ಲಿ (ಬಡ್ಡಿ ಮನ್ನಾ ಮೊತ್ತಕ್ಕೆ ಯಾವುದೇ ಮಿತಿಯಿಲ್ಲದೆ)	ಕಾರ್ಯನಿರ್ವಾಹಕ ಮಂಡಳಿ
ತೀರುವಳಿ ಪ್ರಸ್ತಾವನೆಯು ಅಸಲು ಮತ್ತು ಇತರೆ ವೆಚ್ಚಗಳ ಮನ್ನಾ ಒಳಗೊಂಡಿದ್ದಲ್ಲಿ	ನಿರ್ದೇಶಕ ಮಂಡಳಿ (ಕಾರ್ಯನಿರ್ವಾಹಕ ಮಂಡಳಿಯ ಶಿಫಾರಸ್ಸಿನ ಮೇರೆಗೆ)

* ಒಂದೊಮ್ಮೆ ತೀರುವಳಿ ಪ್ರಸ್ತಾವನೆಯ ಅನುಮೋದಿಸುವ ಅಧಿಕಾರಿಯು ಹಿಂದೆ ಸಾಲ ಮಂಜೂರು ಮಾಡಿದ ಅಧಿಕಾರಿಯಾಗಿದ್ದಲ್ಲಿ ಸದರಿ ಪ್ರಸ್ತಾವನೆಗಳನ್ನು ಮೇಲಿನ ಅಧಿಕಾರಿಗೆ ಸಲ್ಲಿಸತಕ್ಕದ್ದು. ಉದಾಹರಣೆಗೆ ಈ ಹಿಂದೆ 'ಎ' ಅಧಿಕಾರಿಯು ಶಾಖಾ ವ್ಯವಸ್ಥಾಪಕರಾಗಿ ಸಾಲ ಮಂಜೂರು ಮಾಡಿದ್ದರೆ, ಸದರಿ ಸಾಲದ ತೀರುವಳಿ ಪ್ರಸ್ತಾವನೆಯನ್ನು 'ಎ' ಅಧಿಕಾರಿಯು ಉ.ಪ್ರ.ವ್ಯ. ಅಥವಾ ವ.ವ್ಯ.ರ ಹುದ್ದೆಯಲ್ಲಿ ಅನುಮೋದಿಸುವ ಅಧಿಕಾರವನ್ನು ಹೊಂದಿರುವುದಿಲ್ಲ. ಈ ಹುದ್ದೆಯ ಮೇಲಧಿಕಾರಿಗಳು ಅಂತಹ ತೀರುವಳಿ ಪ್ರಸ್ತಾವನೆಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರುತ್ತಾರೆ.

5. ಸಾಮಾನ್ಯ ಮಾರ್ಗಸೂಚಿಗಳು:

(i) ಸದರಿ ಯೋಜನೆಯಡಿ ನೀಡಲಾಗುವ ರಿಯಾಯಿತಿಗಳನ್ನು ಹಕ್ಕೆಂದು ಸಾಧಿಸುವಂತಿಲ್ಲ. ಸದರಿ ಯೋಜನೆಯಡಿ ತೀರುವಳಿ ಪ್ರಸ್ತಾವನೆಯನ್ನು ಒಪ್ಪುವ ಅಥವಾ ತಿರಸ್ಕರಿಸುವ ವಿವೇಚನೆಯ ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ.

(ii) ತೀರುವಳಿ ಪ್ರಸ್ತಾವನೆಯನ್ನು ಪರಿಶೀಲಿಸಲು ಅಸಲು ಬಾಕಿ + ಇತರೆ ವೆಚ್ಚಗಳ ಮೊತ್ತದ ಶೇಕಡ 25ರಷ್ಟು ಹಣವನ್ನು ಮುಂಗಡವಾಗಿ ಪಾವತಿಸತಕ್ಕದ್ದು. ಸದರಿ ಮುಂಗಡ ಹಣವನ್ನು ತೀರುವಳಿ ಪ್ರಸ್ತಾವನೆಯು ತೀರ್ಮಾನವಾಗುವವರೆಗೆ ಎ.ಆರ್.ಪಿ.ಎ. ಖಾತೆಯಲ್ಲಿ ಇಡತಕ್ಕದ್ದು. ಸದರಿ ಮುಂಗಡ ಹಣವನ್ನು ಹಿಂದಿರುಗಿಸತಕ್ಕದ್ದಲ್ಲ. ಒಂದೊಮ್ಮೆ ಭದ್ರತೆ ಆಸ್ತಿ / ವೈಯಕ್ತಿಕ ಆಸ್ತಿಗಳು ಇಲ್ಲದಿದ್ದ ಪ್ರಕರಣಗಳಲ್ಲಿ ಮುಂಗಡ ಹಣ ಪಾವತಿಯ ಬಗ್ಗೆ ನಿಯೋಜಿತ ಪ್ರಾಧಿಕಾರವು ನಿರ್ಧರಿಸುತ್ತದೆ.

(iii) ಒಂದೊಮ್ಮೆ ಸಂಪೂರ್ಣ ತೀರುವಳಿ ಮೊತ್ತವನ್ನು ನಿಗಧಿತ ಸಮಯದಲ್ಲಿ ಪಾವತಿಸದಿದ್ದಲ್ಲಿ, ಮುಂಗಡ ಹಣವನ್ನು ಸಾಲದ ಖಾತೆಗೆ ಜಮಾ ಮಾಡಿಕೊಂಡು ಅನುಮೋದಿತ ತೀರುವಳಿ ಪ್ರಸ್ತಾವನೆಯನ್ನು ರದ್ದುಗೊಳಿಸಿ ಮುಂದಿನ ವಸೂಲಾತಿ ಕ್ರಮವನ್ನು ಜರುಗಿಸಲಾಗುವುದು.

(iv) ಸದರಿ ಯೋಜನೆಯಡಿ ತೀರುವಳಿ ಸೂತ್ರದ ಪ್ರಕಾರ ತೀರ್ಮಾನಿಸಲಾದ ತೀರುವಳಿ ಮೊತ್ತವನ್ನು ಪರಿಷ್ಕರಿಸುವ ಅಥವಾ ಮೇಲೆ ತಿಳಿಸಿರುವ ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ತೀರುವಳಿ ಸೂತ್ರದ ಕನಿಷ್ಠ ಮಿತಿಗಿಂತ ಕಡಿಮೆ ಮೊತ್ತವನ್ನು ತೀರ್ಮಾನಿಸುವ ವಿವೇಚನಾಧಿಕಾರ ಇರುವುದಿಲ್ಲ.

(v) ಎ.ಆರ್.ಪಿ.ಎ. / ಸಸ್ಪೆನ್ಸ್ ಖಾತೆಯಲ್ಲಿರುವ ಮುಂಗಡ ಹಣ / ಪಾವತಿಸಿರುವ ಬಾಗಶ: ತೀರುವಳಿ ಮೊತ್ತವನ್ನು ಸದರಿ ಯೋಜನೆಯಡಿ ಶೇ.25ರಷ್ಟು ಪಾವತಿಸಬೇಕಾದ ಮುಂಗಡ ಹಣಕ್ಕೆ ಗಣನೆಗೆ ತೆಗೆದುಕೊಳ್ಳಲಾಗುವುದು.

(vi) ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾದ ತೀರುವಳಿ ಪ್ರಸ್ತಾವನೆಯನ್ನು ಅವರ ಮೇಲಧಿಕಾರಿ / ಪ್ರಾಧಿಕರದ ಗಮನಕ್ಕೆ ತರತಕ್ಕದ್ದು.

(vii) ಅನುಮೋದಿತ ಸಂಪೂರ್ಣ ತೀರುವಳಿ ಮೊತ್ತವನ್ನು ತಿಳಿಯಪಡಿಸಿದ ಪತ್ರದ ದಿನಾಂಕದಿಂದ 90 ದಿನಗಳೊಳಗಾಗಿ ಬಡ್ಡಿರಹಿತವಾಗಿ ಪಾವತಿಸಬೇಕು. ಶೇ.25ರಷ್ಟು ಅನುಮೋದಿತ ತೀರುವಳಿ ಮೊತ್ತವನ್ನು (ಮುಂಗಡ ಹಣ ಸೇರಿದಂತೆ) 30 ದಿನಗಳೊಳಗಾಗಿ ಪಾವತಿಸಬೇಕು. ಎರಡನೇ ಕಂತು ಶೇ.25ರಷ್ಟು ಅನುಮೋದಿತ ತೀರುವಳಿ ಮೊತ್ತವನ್ನು ತಿಳಿಯಪಡಿಸಿದ ಪತ್ರದ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸಬೇಕು. ಉಳಿದ ಶೇ.50ರಷ್ಟು ಮೊತ್ತವನ್ನು ತಿಳಿಯಪಡಿಸಿದ ಪತ್ರದ ದಿನಾಂಕದಿಂದ 90 ದಿನಗಳೊಳಗಾಗಿ ಪಾವತಿಸಬೇಕು. ತೀರುವಳಿ ಸೌಲಭ್ಯವು ತಿಳಿಯಪಡಿಸಿದ ಪತ್ರದ ದಿನಾಂಕದಿಂದ 90ನೇ ದಿನದ ಕೊನೆಗೆ ತನ್ನಿಂದ ತಾನೇ ರದ್ದಾಗುವುದು. 90 ದಿನಗಳ ಅವಧಿ ಮುಗಿದ ನಂತರ ತೀರುವಳಿ ಸೌಲಭ್ಯವು ರದ್ದಾದ ಬಗ್ಗೆ ಪ್ರವರ್ತಕರಿಗೆ ತಿಳಿಯಪಡಿಸುವುದು ಶಾಖಾ ವ್ಯವಸ್ಥಾಪಕರು / ವಿಭಾಗ ಮುಖ್ಯಸ್ಥರ ಜವಾಬ್ದಾರಿಯಾಗಿರುತ್ತದೆ.

6. ಪ್ರಾಥಮಿಕ / ಪೂರಕ / ವೈಯಕ್ತಿಕ ಆಸ್ತಿಗಳ ಮೌಲ್ಯಮಾಪನದ ಮಾರ್ಗಸೂಚಿಗಳು:

ನಗರ ಪ್ರದೇಶ ಮತ್ತು ಅರೆನಗರ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಪ್ರಾಥಮಿಕ / ಪೂರಕ / ವೈಯಕ್ತಿಕ ಆಸ್ತಿಗಳು	ಶೇ.100ರಷ್ಟು ಉಪನೊಂದಣಾಧಿಕಾರಿಗಳ ಮಾರ್ಗಸೂಚಿ ಮೌಲ್ಯ ಅಥವಾ ಮಾರುಕಟ್ಟೆ ಬೆಲೆ, ಇವೆರಡರಲ್ಲಿ ಹೆಚ್ಚಿನದನ್ನು ಆಸ್ತಿಯ ಮೌಲ್ಯವೆಂದು ನಿಗಧಿಪಡಿಸುವುದು
ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರಾಥಮಿಕ / ಪೂರಕ / ವೈಯಕ್ತಿಕ ಆಸ್ತಿಗಳು	ಶೇ.100ರಷ್ಟು ಉಪನೊಂದಣಾಧಿಕಾರಿಗಳ ಮಾರ್ಗಸೂಚಿ ಮೌಲ್ಯವನ್ನು ಆಸ್ತಿಯ ಮೌಲ್ಯವೆಂದು ನಿಗಧಿಪಡಿಸುವುದು

ಟಿಪ್ಪಣಿ:

(1) ನಗರ ಪ್ರದೇಶ ಮತ್ತು ಅರೆನಗರ ಪ್ರದೇಶಗಳ ವ್ಯಾಪ್ತಿ ಅಂದರೆ:– ಬಿ.ಬಿ.ಎಂ.ಪಿ., ಬಿ.ಎಂ.ಆರ್.ಡಿ.ಎ., ಬಿ.ಐ.ಎ.ಪಿ.ಎ. ಎಲ್ಲಾ ನಗರ ಪಾಲಿಕೆಗಳು, ಎಲ್ಲಾ ಜಿಲ್ಲಾ ಕೇಂದ್ರ ಪ್ರದೇಶಗಳು, ಎಲ್ಲಾ ಪಟ್ಟಣ ಪುರಸಭೆ ಪ್ರದೇಶಗಳು ಮತ್ತು ತಾಲ್ಲೂಕಾ ಕೇಂದ್ರವ ವ್ಯಾಪ್ತಿಯಲ್ಲಿ ಒಳಪಡುವ ಪ್ರದೇಶಗಳು. ಇದಲ್ಲದೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25 ಕಿ.ಮೀ.ಒಳಗಿನ ಹೊರಪ್ರದೇಶಗಳು, ನಗರ ಪಾಲಿಕೆ ವ್ಯಾಪ್ತಿಯಿಂದ 10 ಕಿ.ಮೀ.ಒಳಗಿನ ಹೊರಪ್ರದೇಶಗಳು, ನಗರ/ಪಟ್ಟಣ ಪುರಸಭೆ ವ್ಯಾಪ್ತಿಯಿಂದ 5 ಕಿ.ಮೀ.ಒಳಗಿನ ಹೊರಪ್ರದೇಶಗಳನ್ನು ಅರೆನಗರ ಪ್ರದೇಶಗಳೆಂದು ಪರಿಗಣಿಸುವುದು.

(2) ಗ್ರಾಮೀಣ ಪ್ರದೇಶಗಳ ವ್ಯಾಪ್ತಿ ಅಂದರೆ:– ಮೇಲೆ ತಿಳಿಸಲಾಗಿರುವ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಪ್ರದೇಶಗಳು.

ಅನುಬಂಧ – ಬಿ

ಸಾಲಕ್ಕೆ ಪೂರಕ ಭದ್ರತೆಯಾಗಿ ನೀಡಲಾದ ಮೂರನೇ ಪಕ್ಷಕಾರನಿಗೆ ಸೇರಿದ ಆಸ್ತಿಯನ್ನು ಬಿಡುಗಡೆ ಮಾಡುವ ಬಗ್ಗೆ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳು :-

(1) ಮೂರನೇ ಪಕ್ಷಕಾರನ ಆಸ್ತಿಯ ಮಾಲೀಕ ಅಥವಾ ಕಾನೂನು ಉತ್ತರಾಧಿಕಾರಿ ಮಾತ್ರ ಆಸ್ತಿಯ ಬಿಡುಗಡೆಯ ಬಗ್ಗೆ ಕೋರಬಹುದು ಮತ್ತು ಪೂರಕ ಭದ್ರತೆಯನ್ನಾಗಿ ನೀಡಲಾಗಿರುವ ಆಸ್ತಿಯು ಮಾಲೀಕ ಅಥವಾ ಕಾನೂನು ಉತ್ತರಾಧಿಕಾರಿಯ ಒಂದೇ ವಾಸದ ಮನೆ ಆಸ್ತಿಯಾಗಿರತಕ್ಕದ್ದು.

(2) ಮೂರನೇ ಪಕ್ಷಕಾರ ಎಂಬ ಪದದ ಅರ್ಥ ಒಂದು ಸಾಲದ ಖಾತೆಗೆ ನೀಡಲಾಗಿರುವ ಪೂರಕ ಭದ್ರತೆ ಆಸ್ತಿಯ ಮಾಲೀಕ / ಮಾಲೀಕರು, ಸಾಲಗಾರರ ಕುಟುಂಬದ ಸದಸ್ಯರು / ಸಂಬಂಧಿಗಳು ಆಗಿರಬಾರದು. ಕುಟುಂಬ ಸದಸ್ಯರು ಎಂಬ ಪದವು ಸಂಸ್ಥೆಯ ಸಾಲ ನೀತಿಯಲ್ಲಿ ವಿವರಿಸಿದಂತಿರುತ್ತದೆ.

(3) ಸಂಸ್ಥೆಯು ಈಗಾಗಲೇ ಕನಿಷ್ಟ ಮೂರು ಬಾರಿ ಅಧಿನಿಯಮ 29/ಸರ್ಫೇಸಿ ಕಾಯಿದೆ/ಕಂದಾಯ ವಸೂಲಾತಿ ಕ್ರಮಗಳ ಅಡಿ ಮೂರನೇ ಪಕ್ಷಕಾರರಿಗೆ ಸೇರಿದ ಆಸ್ತಿಗಳನ್ನು ವಶಪಡಿಸಿಕೊಂಡು ಮಾರಾಟಕ್ಕೆ ತಂದು ಮಾರಾಟವಾಗದೇ ಇರುವ ಪ್ರಕರಣಗಳಲ್ಲಿ, ಆಸ್ತಿಯ ಶೇಕಡ 75ರಷ್ಟು ಮೌಲ್ಯವನ್ನು (ಶೇಕಡ 25ರಷ್ಟು ರಿಯಾಯಿತಿ) ಪಾವತಿಸಿಕೊಂಡು ನಂತರ ಸದರಿ ಆಸ್ತಿಯನ್ನು ಆಸ್ತಿಯ ಮಾಲೀಕರು / ಕಾನೂನು ಉತ್ತರಾಧಿಕಾರಿಗೆ ಬಿಡುಗಡೆ ಮಾಡುವುದು.

(4) ಕೆಲವೊಂದು ಸನ್ನಿವೇಶವನ್ನು ಪರಿಗಣಿಸಿ ಅಂದರೆ ಆಸ್ತಿಯ ಮಾಲೀಕರ ಮರಣ, ಅವರ ಆರೋಗ್ಯ ಸ್ಥಿತಿ, ಕಾನೂನು ತೊಡಕುಗಳು ಇರುವಂತಹ ಪ್ರಕರಣಗಳಲ್ಲಿ ಶೇಕಡ 25ಕ್ಕೂ ಹೆಚ್ಚಿನ ರಿಯಾಯಿತಿ ಕೋರಿ ಬರುವ ಪ್ರಸ್ತಾವನೆಗಳನ್ನು ಈ ಕೆಳಗೆ ನಮೂದಿಸಿರುವ ಸನ್ನಿವೇಶಗಳ ಅನ್ವಯ ಹೆಚ್ಚುವರಿ ರಿಯಾಯಿತಿಯನ್ನು ಶೇಕಡ 25ಕ್ಕೆ ಮೀರದಂತೆ ನೀಡಬಹುದು:

ಕ್ರಮ ಸಂಖ್ಯೆ	ವಿವರ	ಶೇಕಡಾವಾರು
1	ಪೂರಕ ಭದ್ರತೆ ಆಸ್ತಿಯ ಮಾಲೀಕರು ಅವರ ಆಸ್ತಿಯನ್ನು ಸಂಸ್ಥೆಗೆ ಅಡಮಾನ ಮಾಡಿದ ನಂತರ ಮರಣ ಹೊಂದಿದಲ್ಲಿ ಅಥವಾ ಪೂರಕ ಭದ್ರತೆ ಆಸ್ತಿಯ ಮಾಲೀಕರು ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿದ್ದು ಅಸಮರ್ಥರಾಗಿದ್ದಲ್ಲಿ	20%
2	ಪೂರಕ ಭದ್ರತೆ ಆಸ್ತಿಯ ಮೇಲೆ ನ್ಯಾಯಾಲಯದಲ್ಲಿ ಯಾವುದೇ ದಾವೆ ಇದ್ದು ಕನಿಷ್ಟ ಎಂಟು ಬಾರಿ ಮಾರಾಟಕ್ಕೆ ತಂದಾಗ್ಯೂ ಆಸ್ತಿಯು ಮಾರಾಟವಾಗದಿದ್ದಲ್ಲಿ (ದಾವೆಯು 31.03.2011ಕ್ಕೆ ಮುಂಚೆ ಹೂಡಿರತಕ್ಕದ್ದು)	5%
3	ಆಸ್ತಿಯ ಅಸ್ತಿತ್ವಕ್ಕೆ ಸಂಬಂಧಪಟ್ಟ ದುಷ್ಪರಿಣಾಮಗಳು ಅಂದರೆ ಆಸ್ತಿಯ ಸುತ್ತಲೂ ಕೊಳಗೇರಿ ಇರುವುದು, ಅನೇಕ ಬಾಡಿಗೆದಾರರು ವಾಸಿಸುತ್ತಿರುವುದು, ಮತ್ತೊಬ್ಬರಿಗೆ ಆಸ್ತಿಯನ್ನು ಕರಾರು ಮೇಲೆ ಕೊಟ್ಟಿರುವುದು, ಇತರೆ ಇದ್ದಲ್ಲಿ ಸಮಿತಿಯು ಅಂತಹ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಹೆಚ್ಚುವರಿ ರಿಯಾಯಿತಿ ನೀಡುವ ಬಗ್ಗೆ ತೀರ್ಮಾನಿಸಲಾಗುವುದು.	5%

(5) ಪಾವತಿಯ ವಿಧಾನ: ಅನುಮೋದಿತ ಮೊತ್ತವನ್ನು ತಿಳಿಯಪಡಿಸಿದ ಪತ್ರದ ದಿನಾಂಕದಿಂದ 90 ದಿನಗಳೊಳಗಾಗಿ ಪರಿಷ್ಕೃತ ದೀರ್ಘಕಾಲೀನ ಸುಸ್ತಿ ಆಸ್ತಿಗಳ ತೀರುವಳಿ ಯೋಜನೆಯ ಸಾಮಾನ್ಯ ಮಾರ್ಗಸೂಚಿ ಖಂಡಿಕೆ 5(vii)ರ ಅನ್ವಯ ಪಾವತಿಸತಕ್ಕದ್ದು.

(6) ಮೂರನೇ ಪಕ್ಷಕಾರರಿಗೆ ಸೇರಿದ ಆಸ್ತಿಯನ್ನು ಬಿಡುಗಡೆ ಮಾಡುವ ಬಗ್ಗೆ ಅಧಿಕಾರ ವ್ಯಾಪ್ತಿ:

ಕ್ರಮ ಸಂಖ್ಯೆ	ವಿವರ	ಅಂಗೀಕಾರ ಪ್ರಾಧಿಕಾರ
1	ಶೇಕಡ 75ರಷ್ಟು ಆಸ್ತಿಯ ಮೌಲ್ಯವನ್ನು ಪಾವತಿಸಿಕೊಂಡು ಆಸ್ತಿಯನ್ನು ಬಿಡುಗಡೆ ಮಾಡುವ ಪ್ರಕರಣಗಳು:	
	ಅ) ಅನುಮೋದಿಸಲ್ಪಡುವ ಮೊತ್ತ 20.00 ಲಕ್ಷ ರೂ.ಗಳು ಮತ್ತು ಅದಕ್ಕೂ ಕಡಿಮೆ ಇರುವ ಪ್ರಕರಣಗಳಲ್ಲಿ	ಪ್ರಧಾನ ವ್ಯವಸ್ಥಾಪಕರು
	ಆ) ಅನುಮೋದಿಸಲ್ಪಡುವ ಮೊತ್ತ 20.00 ಲಕ್ಷ ರೂ.ಗಳಿಗೆ ಹೆಚ್ಚಿದ್ದು ಹಾಗೂ 50.00 ಲಕ್ಷ ರೂ.ಗಳಿಗೆ ಕಡಿಮೆ ಇರುವ ಪ್ರಕರಣಗಳಲ್ಲಿ	ಕಾರ್ಯನಿರ್ವಾಹಕ ನಿರ್ದೇಶಕರು
	ಇ) ಅನುಮೋದಿಸಲ್ಪಡುವ ಮೊತ್ತ 50.00 ಲಕ್ಷ ರೂ.ಗಳು ಮೀರಿದ ಪ್ರಕರಣಗಳಲ್ಲಿ	ವ್ಯವಸ್ಥಾಪಕ ನಿರ್ದೇಶಕರು
2	ಆಸ್ತಿಯ ಮೌಲ್ಯದ ಮೇಲೆ ಶೇಕಡ 25ಕ್ಕೂ ಹೆಚ್ಚಿನ ರಿಯಾಯಿತಿ ಕೋರಿ ಬಂದ ಪ್ರಕರಣಗಳು	ನಿರ್ದೇಶಕ ಮಂಡಳಿ (MCAR ಉಪಸಮಿತಿಯ ಶಿಫಾರಸ್ಸಿನ ಮೇರೆಗೆ)

(7) ಸಾಮಾನ್ಯ ಮಾರ್ಗಸೂಚಿಗಳು:

1. ಸದರಿ ಯೋಜನೆಯಡಿ ದೊರೆಯುವ ಪರಿಹಾರವನ್ನು ಹಕ್ಕು ಎಂದು ಪಡೆಯುವಂತಿಲ್ಲ. ಸಂಸ್ಥೆಯು ಸದರಿ ಯೋಜನೆಯಡಿ ಕೋರಿಕೆಯನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ಹಾಗೂ ಕೈಗೊಳ್ಳುವ ತೀರ್ಮಾನವನ್ನು ಕಾಯ್ದಿರಿಸಿದೆ.

2. ಪೂರಕ ಭದ್ರತೆ ಆಸ್ತಿಯ ಶೇಕಡ 75ರಷ್ಟು ಮೌಲ್ಯದ ಮೇಲೆ ಶೇಕಡ 10ರಷ್ಟು ಮುಂಗಡ ಹಣವನ್ನು ಪ್ರಸ್ತಾವನೆಯನ್ನು ಪರಿಶೀಲಿಸುವುದಕ್ಕೆ ಮುಂಚಿತವಾಗಿ ಪಾವತಿಸತಕ್ಕದ್ದು ಹಾಗೂ ಆ ಹಣವನ್ನು ಎ.ಆರ್.ಪಿ.ಎ. ಖಾತೆಯಲ್ಲಿ ಕೊನೆಯ ನಿರ್ಧಾರವಾಗುವವರೆಗೆ ಇಡಲಾಗುವುದು.

3. ಒಂದೊಮ್ಮೆ ಪೂರಕ ಭದ್ರತೆ ಆಸ್ತಿಯನ್ನು ಬಿಡುಗಡೆ ಮಾಡುವುದಕ್ಕೆ ಅನುಮೋದಿಸಲ್ಪಟ್ಟ ಮೊತ್ತವನ್ನು ನಿಗಧಿತ ಸಮಯದಲ್ಲಿ ಪಾವತಿಸದಿದ್ದಲ್ಲಿ ಈಗಾಗಲೇ ಪಾವತಿಸಿರುವ ಹಣವನ್ನು ಸಾಲದ ಖಾತೆಗೆ ಜಮಾ ಮಾಡಿ ಸದರಿ ಪ್ರಸ್ತಾವನೆಯನ್ನು ರದ್ದುಗೊಳಿಸಿ ಮುಂದಿನ ಸಾಮಾನ್ಯ ವಸೂಲಾತಿ ಕ್ರಮವನ್ನು ಜರುಗಿಸಲಾಗುವುದು. ಸದರಿ ಯೋಜನೆಯಡಿ ಸಕ್ಷಮ ಪ್ರಾಧಿಕಾರವು ಅನುಮೋದಿಸಲ್ಪಟ್ಟ ಮೊತ್ತವನ್ನು ಕಡಿಮೆ ಮಾಡಲು ಹಾಗೂ ಯಾವುದೇ ಪರಿಷ್ಕರಣೆಗೆ ಅವಕಾಶ ಇರುವುದಿಲ್ಲ.

4. ಒಂದೊಮ್ಮೆ ಮೂರನೇ ಪಕ್ಷಕಾರನು ಪೂರಕ ಭದ್ರತೆ ಆಸ್ತಿಯನ್ನು ಬಿಡುಗಡೆಗೊಳಿಸುವ ಅಥವಾ ಉಳಿಸಿಕೊಳ್ಳುವ ಸಲುವಾಗಿ ಸಂಸ್ಥೆಗೆ ಯಾವುದೇ ಮೊತ್ತವನ್ನು ಸ್ವತಃ ಪಾವತಿಸಿದಲ್ಲಿ, ಆ ಮೊತ್ತವನ್ನು ಈ ಯೋಜನೆಯಡಿ ನಿಗಧಿಪಡಿಸುವ ಮೊತ್ತದ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

5. ಒಂದೊಮ್ಮೆ ಪೂರಕ ಭದ್ರತೆ ಆಸ್ತಿಯ ಮಾಲೀಕರು ತನ್ನ ವೈಯಕ್ತಿಕ ಖಾತರಿಯನ್ನು ಸಾಲಕ್ಕೆ ನೀಡಿದಲ್ಲಿ ಪೂರಕ ಭದ್ರತೆ ಆಸ್ತಿಯನ್ನು ಮಾತ್ರ ನಿಗಧಿತ ಮೊತ್ತ ಪಾವತಿಸಿದ ನಂತರ ಬಿಡುಗಡೆ ಮಾಡಲಾಗುವುದು. ಆದರೆ ವೈಯಕ್ತಿಕ ಖಾತರಿಗೆ ಸಂಬಂಧಪಟ್ಟಂತೆ ಅವರ ಹೆಸರಿನಲ್ಲಿರುವ ಆಸ್ತಿಗಳ ತನಿಖೆಯ ನಂತರ, ಅವರ ಹೆಸರಿನಲ್ಲಿ ಯಾವುದೇ ಆಸ್ತಿಯು ಇಲ್ಲದಿದ್ದಲ್ಲಿ, ಅವರ ವೈಯಕ್ತಿಕ ಖಾತರಿಯನ್ನು ಬಿಡುಗಡೆ ಮಾಡಲಾಗುವುದು.

6. ಪ್ರಾಥಮಿಕ ಆಸ್ತಿಯು ಲಭ್ಯವಿದ್ದು, ಅದರ ಮಾರಾಟಕ್ಕೆ ಕಾನೂನು ತೊಡಕಿದ್ದಲ್ಲಿ ಅಥವಾ ಮಾರಾಟವಾಗದೇ ಉಳಿದಿದ್ದಲ್ಲಿ, ಮೂರನೇ ಪಕ್ಷಕಾರನ ಪೂರಕ ಭದ್ರತೆ ಆಸ್ತಿಯನ್ನು ಸದರಿ ಯೋಜನೆಯಡಿ ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

7. ಪೂರಕ ಭದ್ರತೆ ಆಸ್ತಿಯ ಮಾಲೀಕರು ಮರಣ ಹೊಂದಿದ್ದಲ್ಲಿ ಅಥವಾ ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿದ್ದಲ್ಲಿ, ಶೇಕಡ 25ಕ್ಕೂ ಹೆಚ್ಚಿನ ರಿಯಾಯಿತಿಯನ್ನು ಕೋರಿದಲ್ಲಿ ಅಂತಹ ಪ್ರಕರಣಗಳಲ್ಲಿ ವೃಧೀಕರಿಸಲಾದ ಪ್ರಮಾಣ ಪತ್ರವನ್ನು ಪುರಾವೆಯಾಗಿ ಒದಗಿಸತಕ್ಕದ್ದು.

8. ಪೂರಕ ಭದ್ರತೆ ಆಸ್ತಿಯ ಮೌಲ್ಯಮಾಪನವನ್ನು ಪರಿಷ್ಕೃತ ದೀರ್ಘಕಾಲೀನ ಸುಸ್ತಿ ಆಸ್ತಿಗಳ ತೀರುವಳಿ ಯೋಜನೆಯಡಿ ತಿಳಿಪಡಿಸಿದ ಮಾರ್ಗಸೂಚಿಯ ಅನ್ವಯ ಮಾಡತಕ್ಕದ್ದು.

9. ಮೂರನೇ ಪಕ್ಷಕಾರನಿಗೆ ಸದರಿ ಪೂರಕ ಭದ್ರತೆ ಆಸ್ತಿಯನ್ನು ಬಿಟ್ಟು ಬೇರಾವುದೇ ವಸತಿ / ವಾಣಿಜ್ಯ / ಖಾಲಿ ನಿವೇಶನ ಆಸ್ತಿಯು ಅವನ/ಅವಳ ಹೆಸರಿನಲ್ಲಿ ಇದ್ದಲ್ಲಿ ಈ ಯೋಜನೆಗೆ ಅರ್ಹವಿರುವುದಿಲ್ಲ. ಇದಲ್ಲದೇ ಈ ವಿಷಯವನ್ನು ವೃಧೀಕರಿಸುವ ಸಲುವಾಗಿ ಅವರಿಂದ ಪ್ರಮಾಣಪತ್ರವೊಂದನ್ನು ಪಡೆಯ ಅವರ ಹೆಸರಿನಲ್ಲಿ ಇರಬಹುದಾದ ಸ್ಥಿರಾಸ್ತಿಯ ತನಿಖೆಯನ್ನು ಸಂಬಂಧಪಟ್ಟ ಶಾಖೆ / ವಿಭಾಗವು ಮಾಡತಕ್ಕದ್ದು.

10. ಒಂದೊಮ್ಮೆ ಒಂದು ಸಾಲದ ಖಾತೆಗೆ ಒಂದಕ್ಕಿಂತ ಹೆಚ್ಚಿನ ಪೂರಕ ಭದ್ರತೆ ಆಸ್ತಿಯನ್ನು ಒದಗಿಸಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಒಬ್ಬರಿಗೆ ಸೇರಿದ ಪೂರಕ ಭದ್ರತೆ ಆಸ್ತಿಯನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಇತರೆ ಪೂರಕ ಭದ್ರತೆ ಆಸ್ತಿಯ ಮಾಲೀಕರಿಗೆ ಅದನ್ನು ಮುಂಚಿತವಾಗಿ ಲಿಖಿತವಾಗಿ ತಿಳಿಸತಕ್ಕದ್ದು ಹಾಗೂ ಅವರಿಗೆ ಸದರಿ ಯೋಜನೆಯಡಿ ಅವರಿಗೆ ಆಸಕ್ತಿಯಿದ್ದಲ್ಲಿ ಅವರ ಪೂರಕ ಭದ್ರತೆ ಆಸ್ತಿಯನ್ನು ಬಿಡುಗಡೆ ಮಾಡಿಸಿಕೊಳ್ಳುವಂತೆ ಸೂಚಿಸುವುದು.

-:0:-